ಲಿಖಿತ ಮೂಲಕ ಉತ್ತರಿಸುವ

# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೆಂಟನೆಯ ಅಧಿವೇಶನ

## ಗುರುವಾರ, ದಿನಾಂಕ: 18ನೇ ಜುಲೈ, 2019

ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತ

(ಎಂ.ಎಂ.ಎಲ್) ದಿಂದ ಗಣಿಗಾರಿಕೆಗೆ ಗುತ್ತಿಗೆ ನೀಡಿರುವ ಕುರಿತು

ಶ್ರೀ ನಿರಾಣಿ ಹಣಮಂತ್ ರುದ್ರಪ್ಪ (ಪದವೀಧರರ ಕ್ಷೇತ್ರ) :-

309 (345) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತ (ಎಂ.ಎಂ.ಎಲ್) ದಿಂದ ಇಲ್ಲಿಯವರೆಗೂ ರಾಜ್ಯದಲ್ಲಿ ಎಷ್ಟು ಜನರಿಗೆ ಮತ್ತು ಎಷ್ಟು ಸಂಸ್ಥೆಗಳಿಗೆ ಗಣಿಗಾರಿಕೆಗೆ ಗುತ್ತಿಗೆ (ಲೀಸ್) ನೀಡಲಾಗಿದೆ ; ಯಾವ ಯಾವ ಖನಿಜಗಳನ್ನು ಹೊರತೆಗೆಯಲು ಅನುಮತಿ ನೀಡಲಾಗಿದೆ ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತ (ಎಂ.ಎಂ.ಎಲ್) ದಿಂದ ಸುಣ್ಣದಕಲ್ಲು (ಲೈಮ್ ಸ್ಟೋನ್) ಮತ್ತು ಡೋಲೋಮೈಟ್ ಖನಿಜಗಳ ಗಣಿಗಾರಿಕೆಗಾಗಿ ರಾಜ್ಯದಲ್ಲಿ ಇಲ್ಲಿಯವರೆಗೂ ಒಟ್ಟು ಎಷ್ಟು ಜನರಿಗೆ/ಸಂಸ್ಥೆಗಳಿಗೆ ಅನುಮತಿ ನೀಡಲಾಗಿದೆ ;

(ಇ) ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತ (ಎಂ.ಎಂ.ಎಲ್) ದಿಂದ ಲೀಸ್ ಪಡೆದ ಪ್ರತಿಯೊಬ್ಬರಿಗೆ ಅಥವಾ ಪ್ರತಿ ಸಂಸ್ಥೆಗೆ ನೀಡಲಾಗಿರುವ ಲೀಸ್‌ನ ಅವಧಿ ಎಷ್ಟು ; ಯಾವ ದಿನಾಂಕದಿಂದ ಮತ್ತು ಎಷ್ಟು ಎಕರೆ ಪ್ರದೇಶದಲ್ಲಿ ಎಷ್ಟು ಘನವಿಸ್ತೀರ್ಣ ಗಣಿಗಾರಿಕೆಗೆ ಅನುಮತಿ ನೀಡಲಾಗಿದೆ ;

(ಈ) ಲೀಸ್ ಪಡೆದ ಪ್ರತಿಯೊಬ್ಬರೂ ಇಲ್ಲಿಯವರೆಗೂ ಎಷ್ಟು ಪ್ರಮಾಣದ ಖನಿಜವನ್ನು ಹೊರತೆಗೆದಿರುತ್ತಾರೆ ;

(ಉ) ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತಗೆ ಗಣಿಗಾರಿಕೆಯಿಂದ ಆದಾಯ ಎಷ್ಟು ಬರುತ್ತಿರುವುದು ; ಕಳೆದ 05 ವರ್ಷಗಳಿಂದ ಪ್ರತಿ ವರ್ಷವಾರು ಪ್ರತಿ ಖನಿಜವಾರು ಮಾಹಿತಿ ನೀಡುವುದು ;

(ಊ) ಕರ್ನಾಟಕ ರಾಜ್ಯ ಖನಿಜ ಅಭಿವೃದ್ಧಿ ನಿಗಮ ನಿಯಮಿತದಿಂದ ಇಲ್ಲಿಯವರೆಗೂ ಎಷ್ಟು ಜನರಿಗೆ/ಸಂಸ್ಥೆಗಳಿಗೆ ಗುತ್ತಿಗೆಯನ್ನು ಬಿಟ್ಟುಕೊಡಲಾಗಿದೆ ; ಮತ್ತು ಗುತ್ತಿಗೆಯನ್ನು ವರ್ಗಾಯಿಸಲಾಗಿದೆ ;

(ಋ) ರಾಜ್ಯದಲ್ಲಿ ಸ್ವಂತ ಗಣಿಗಾರಿಕೆಯನ್ನು ಹೊಂದಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು ; ಅವುಗಳಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಕಾರ್ಖಾನೆಗಳು ಎಷ್ಟು ;

(ಎ) ಸದರಿ ಕಾರ್ಖಾನೆಗಳಲ್ಲಿ ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸಲು ಕೈಗೊಂಡಿರುವ ಕ್ರಮಗಳೇನು ?